ಇರಲಿಲ್ಲ. ಅವರು ಎಲ್ಲ ಅರ್ಥದಲ್ಲಿಯೂ ನೆಲಕ್ಕಂಟಿಕೊಂಡಿರುತ್ತಿದ್ದರು. ನೆಲವನ್ನು ಬಿಟ್ಟು ಬದುಕುವುದು ಅವರಿಗೆ ಸಾಧ್ಯವೂ ಇರಲಿಲ್ಲ.

2018ರಲ್ಲಿ ಕೊಡಗಿನಲ್ಲಿ ಭೂಕುಸಿತ ಆದಾಗ ವಿಜಯ್ ಅಲ್ಲಿಗೆ ತೆರಳಿ ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು. ಸಾಮಾಜಿಕ ಚಳವಳಿಯಲ್ಲಿ ಇರುತ್ತಿದ್ದರು. ಕೊರೊನಾ ಸಂದರ್ಭದಲ್ಲೂ ಅವರು 'ಉಸಿರು' ಎಂಬ ಸಂಘಟನೆ ಜೊತೆ ಅಗತ್ಯವಿದ್ದವರಿಗೆ ಆಮ್ಲಜನಕ – ಆಹಾರದ ನೆರವು ನೀಡಲು ಕೈಜೋಡಿಸಿದ್ದರು.

'ಕಲೆ ಮನುಷ್ಯನನ್ನು ಹೆಚ್ಚು ಮಾನವೀಯಗೊಳಿಸುತ್ತದೆ' ಎಂಬ ಮಾತಿಗೆ ನಿದರ್ಶನದಂತಿದ್ದ ವಿಜಯ್ ಜುಲೈ 12ರ ರಾತ್ರಿ ಬೈಕ್ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡು ಆಸ್ಪತ್ರೆ ಸೇರಿದಾಗ ಮಾಧ್ಯಮಗಳು ಮಾತ್ರ ಮಾನವೀಯತೆಯ ಘನತೆಯನ್ನು ಮರೆತು ವರ್ತಿಸಿದ್ದು ವಿಪರ್ಯಾಸ. ಆಸ್ಪತ್ರೆ ಘೋಷಿಸುವ ಮೊದಲೇ ವಿಜಯ್ ಸಾವಿನ ಸುದ್ದಿ ಹಲವು ಮಾಧ್ಯಮಗಳಲ್ಲಿ ಬಿತ್ತರವಾಗಿತ್ತು. ಮುಖ್ಯಮಂತ್ರಿ ಸೇರಿದಂತೆ ಸೆಲೆಬ್ರಿಟಿಗಳು ಸೋಷಿಯಲ್ ಮೀಡಿಯಾದಲ್ಲಿ ಸಂತಾಪ ಸೂಚಿಸಿದ್ದರು. ಅವರಿಗೆ ಹೋಗುವುದಕ್ಕೆ ಇರುವ ಅವಸರಕ್ಕಿಂತ ನಮಗೆ ಕಳಿಸುವುದಕ್ಕೆ ಅವಸರವಿದೆ ಎಂಬಂತೆ ವರ್ತಿಸಿದವು. ಸೂಕ್ಷ್ಮ ಸಂವೇದನೆಯ ವ್ಯಕ್ತಿಯೊಬ್ಬನ ಸಾವಿನ ಸಂದರ್ಭದಲ್ಲಿ ಸಮಾಜ ಅಸೂಕ್ಷ್ಮವಾಗಿ ವರ್ತಿಸಿದ್ದು ಒಂದು ಕಪ್ಪುಚುಕ್ಕೆಯಾಗಿ ಯಾವತ್ತೂ ಉಳಿದಿರುತ್ತದೆ.

ಜೂನ್ 15ರ ಬೆಳಿಗ್ಗೆ 3.34ಕ್ಕೆ ಸಂಚಾರಿ ವಿಜಯ್ ಅಸುನೀಗಿದರು. ಅವರ ದೇಹದ ಅಂಗಾಂಗಗಳನ್ನು ದಾನ ಮಾಡುವ ಕುಟುಂಬದ ನಿರ್ಧಾರ ವಿಜಯ್ ಬದುಕಿದ ರೀತಿಗೆ ಘನತೆಯ ಪೂರ್ಣವಿರಾಮವನ್ನೇ ನೀಡಿದೆ.

ವಿಜಯ್, ಕೋಟ್ಯಂತರ ಅಭಿಮಾನಿಗಳನ್ನು ಹೊಂದಿರುವ ಸ್ಟಾರ್ ನಟ ಅಲ್ಲದಿರಬಹುದು. ನೂರಾರು ಅಭಿಮಾನಿ ಸಂಘಟನೆಗಳು, ಲೆಕ್ಕ ಮೀರಿದ ಆಸ್ತಿ ಗಳಿಸಿದ ನಟ ಅಲ್ಲದಿರಬಹುದು. ಆದರೆ ಅವರ ಸಹಾಯ– ಸ್ನೇಹವನ್ನು ಅನುಭವಿಸಿದ, ಅವರ ನಟನೆಯನ್ನು ಮೆಚ್ಚಿದವರ ಮನಸ್ಸಿನ ದಿವ್ಯಾಂಬರದಲ್ಲಿ ಸದಾ ಸಂಚರಿಸುತ್ತಲೇ ಇರುವಷ್ಟು ಉಜ್ವಲವಾಗಿ ಬದುಕಿದವರು. ಒಂದು ಒಳ್ಳೆಯ ಸಿನಿಮಾದಲ್ಲಿ ನೋಡಿದ್ದಕ್ಕಿಂತ ನೋಡದೇ ಉಳಿದಿದ್ದೇ ಬಹುಕಾಲ ನಮ್ಮನ್ನು ಕಾಡುವ ಹಾಗೆ ಸಂಚಾರಿ ವಿಜಯ್ ಜನರ ಮನಸ್ಸಿನಲ್ಲಿ ಬಹುಕಾಲ ಉಳಿಯುವುದಂತೂ ದಿಟ. ■







# ಸ್ಟಾರ್ ನಟರ ಚಿತ್ರರಂಗಪ್ರೇಮದ ಸುತ್ತ...

'ದಕ್ಷಿಣ ಭಾರತದ ಚಿತ್ರರಂಗ ನಾನು ಹಾಗು ನನ್ನಂಥ ಅಸಂಖ್ಯರಿಗೆ ಅಭಿವ್ಯಕ್ತಿಯ ವೇದಿಕೆಯನ್ನು ಕಲ್ಪಿಸಿದೆ. ಈ ವೇದಿಕೆಯನ್ನು ನಮ್ಮ ಹಿಂದಿನ ಹಲವು ಮೇರುವ್ಯಕ್ತಿಗಳು ಸೇರಿ ನಿರ್ಮಿಸಿದ್ದು. ಈ ವೇದಿಕೆ ನನ್ನ ಬದುಕನ್ನು ಶೂನ್ಯದಿಂದ ಇಂದು ನಾನು ಏನಾಗಿದ್ದೇನೋ ಅಲ್ಲಿಯವರೆಗೆ ತಂದು ನಿಲ್ಲಿಸಿದೆ. ಇದು ಇಲ್ಲಿ ಕೆಲಸ ಮಾಡುವ ಸಾವಿರಾರು ಜನರ ಬದುಕು.'

ಹೀಗೆ ನಟ, ನಿರ್ದೇಶಕ ರಕ್ಷಿತ್ ಶೆಟ್ಟಿ ಭಾವುಕರಾಗಿ ಇತ್ತೀಚೆಗೆ ಒಂದು ಟ್ವೀಟ್‌ಗೆ ಪ್ರತಿಕ್ರಿಯಿಸಿದ್ದರು. 'ಕೆಟ್ಟ ದಕ್ಷಿಣ ಭಾರತದ ಚಿತ್ರರಂಗದಲ್ಲಿ ಕೊನೆಗೂ ಒಂದು ಆಶಾಕಿರಣ ಕಾಣಿಸಿಕೊಂಡಿದೆ. ಚೇತನ್ ಅಹಿಂಸ ಅವರು ಕನ್ನಡ ಚಿತ್ರರಂಗವೆಂಬ ಈ ಬರಗೆಟ್ಟ ನೆಲದಲ್ಲಿ ಅತ್ಯಗತ್ಯವಾಗಿದ್ದ ವರ್ಷಧಾರೆಯಂತೆ ಕಾಣಿಸುತ್ತಿದ್ದಾರೆ' ಎಂದು ಪತ್ರಕರ್ತರೊಬ್ಬರು ಮಾಡಿದ ಟ್ವೀಟ್ ಶೇರ್ ಮಾಡಿದ ರಕ್ಷಿತ್ ಮೇಲಿನ ಹಾಗೆ ಬರೆದುಕೊಂಡಿದ್ದಾರೆ. ಇದೇ ಟ್ವೀಟ್ ಕಮೆಂಟ್ ವಿಭಾಗದಲ್ಲಿ ಅವರು ಚೇತನ್ ಬಗ್ಗೆ ಗೌರವ ಇರುವುದಾಗಿಯೂ ಬರೆದುಕೊಂಡಿದ್ದಾರೆ.

ಕೆಲವು ದಿನಗಳ ಹಿಂದೆ ಚೇತನ್ ಮತ್ತು ಉಪೇಂದ್ರ ನಡುವೆ ಸೋಷಿಯಲ್ ಮೀಡಿಯಾದಲ್ಲಿ ಜಾತಿ ವಿಚಾರದಲ್ಲಿ ವಾಗ್ವಾದ ನಡೆದಿತ್ತು. ಕನ್ನಡ ಚಿತ್ರರಂಗದ ಇಬ್ಬರು ನಟರು ಜಾತಿಯ ಬಗ್ಗೆ, ಸಾಮಾಜಿಕ ಸಮಸ್ಯೆಗಳ ಬಗ್ಗೆ ಪರಸ್ಪರ ಚರ್ಚೆಗಿಳಿದಿರುವುದು ಒಳ್ಳೆಯ ಸೂಚನೆಯೇ. ಹಾಗೆಯೇ ಇದರ ಕುರಿತು ಟ್ವಿಟರ್‌ನಲ್ಲಿ ಶೇರ್ ಮಾಡಿಕೊಂಡು 'ದಕ್ಷಿಣ ಭಾರತದ ಕೆಟ್ಟ ಚಿತ್ರರಂಗ', 'ಕನ್ನಡ ಚಿತ್ರರಂಗವೆಂಬ ಬರಗೆಟ್ಟ ನೆಲ' ಎಂಬರ್ಥದ ಮಾತುಗಳನ್ನು ಬಳಸಿ ಹೀಗಳೆದಿರುವುದೂ ಆಕ್ಷೇಪಾರ್ಹವೇ. ಯಾವ ಚಿತ್ರರಂಗವಾಗಲಿ, ಕ್ಷೇತ್ರವಾಗಲಿ ಅದರಷ್ಟಕ್ಕೆ ಅದು ಒಳ್ಳೆಯದು ಕೆಟ್ಟದ್ದು ಆಗಿರುವುದಿಲ್ಲ. ಅಲ್ಲಿ ಇರುವ ಜನರ ನಡವಳಿಕೆಗಳು ಆಕ್ಷೇಪಾರ್ಹ ಆಗಿರಬಹುದಷ್ಟೆ. ಹೀಗಾಗಿ ರಕ್ಷಿತ್ ಅವರಿಗೆ ಈ ಟ್ವೀಟ್ ಕೋಪ ಉಕ್ಕಿಸಿದ್ದರಲ್ಲಿ ಅಚ್ಚರಿಯಿಲ್ಲ. ತಾವು ಕೆಲಸ ಮಾಡುವ, ತಮಗೆ ಬದುಕನ್ನು ನೀಡಿದ ಕೆಲಸ, ಕ್ಷೇತ್ರದ ಬಗ್ಗೆ ಕೃತಜ್ಞತೆ ಹೊಂದಿರುವ ಯಾರಿಗಾದರೂ ಕೋಪ ಉಕ್ಕುವುದು ಸಹಜವೇ.

ಆದರೆ ಇಲ್ಲಿ ಇನ್ನೊಂದು ಸೂಕ್ಷ್ಮವಿದೆ. ಚಿತ್ರಂಗದ ಬಗ್ಗೆ ಯಾರೋ ಹೀಗಳೆದಾಗ ರೋಷವುಕ್ಕಿ ಮಾತನಾಡಿರುವ ರಕ್ಷಿತ್ ಅವರಂಥ ಸ್ಟಾರ್ ನಟರಿಗೆ ಚಿತ್ರರಂಗದ ಘನತೆಗೆ ಮಸಿ ಬಳಿಯುವ ಸಂಗತಿಗಳ ಬಗ್ಗೆ ರೋಷ ಉಕ್ಕುವುದಿಲ್ಲ. ಹಿಂದಿನ ಅನೇಕ ಮೇರುವ್ಯಕ್ತಿಗಳು ಕಷ್ಟಪಟ್ಟು ಕಟ್ಟಿರುವ ಈ ವೇದಿಕೆಗೆ 'ಕ್ಯಾಸ್ಟಿಂಗ್ ಕೌಚ್', 'ಲೈಂಗಿಕ ದೌರ್ಜನ್ಯ'ದ ಕಳಂಕ ಅಂಟಿದಾಗ ಮಾತಾಡಬೇಕು ಅನಿಸುವುದಿಲ್ಲ. 'ತಮ್ಮ ಮೇಲೆ ದೌರ್ಜನ್ಯವಾಗಿದೆ' ಎಂದು ಹೇಳಿಕೊಳ್ಳಲು ಬಂದ ನಟಿಯರ ಮೇಲೇ ಇಡೀ ಚಿತ್ರರಂಗ, ಸಮಾಜ ಮುಗಿಬಿದ್ದು ಹೀನಾಯವಾಗಿ ನಡೆಸಿಕೊಂಡಾಗ 'ಇದು ತಪ್ಪು. ಸುಳ್ಳೋ ಸತ್ಯವೋ ನಿರ್ಧರಿಸಲು ಬೇರೆ ವ್ಯವಸ್ಥೆ ಇದೆ. ಅವರಿಗೆ ಮಾತಾಡಲು ಬಿಡಿ' ಎಂದು ಗಟ್ಟಿಯಾಗಿ ನಿಂತುಕೊಳ್ಳುವುದು ಮುಖ್ಯ ಅನಿಸಿಲ್ಲ.

ಪರಂಪರೆಯ ಘನತೆಯನ್ನು ನೆನಪಿಸಿಕೊಂಡು ಭಾವುಕರಾದ ಮಾತ್ರಕ್ಕೆ ವರ್ತಮಾನದ ವಾಸ್ತವ ಬದಲಾಗಿಬಿಡುವುದಿಲ್ಲ. ತಪ್ಪು ಕಂಡಾಗ ದಿಟ್ಟವಾಗಿ ವಿರೋಧಿಸುವುದೂ ನಮಗೆ ಅನ್ನ, ಕೀರ್ತಿ, ಗೌರವ ನೀಡಿದ ಕ್ಷೇತ್ರಕ್ಕೆ ನಾವು ಸಲ್ಲಿಸಲೇಬೇಕಾದ ಗೌರವದ ರೂಪವೇ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು. ಆಗ ಮಾತ್ರ ಹೀನಾಯವಾಗಿ ಮಾತಾಡುವವರ ವಿರುದ್ಧವೂ ಗಟ್ಟಿಯಾಗಿ ವಿರೋಧಿಸುವ ನೈತಿಕತೆ ಸಿಗುತ್ತದೆ. ಇಲ್ಲದೇ ಹೋದರೆ ಇವರ ಚಿತ್ರರಂಗದ ಬಗೆಗಿನ ಪ್ರೀತಿಯೂ ತೆರೆಯ ಮೇಲೆ ಕಾಣಿಸಿಕೊಳ್ಳುವ ಎಷ್ಟೋ ಪೊಳ್ಳು ಪಾತ್ರಗಳ ಮತ್ತೊಂದು ರೂಪವಷ್ಟೇ ಎಂದೇ ಹೇಳಬೇಕಾಗುತ್ತದೆ.

